2019 ಕ.ತೀ.ವ 1436

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಪಿ. ಸಂದೇಶ್

ಶ್ರೀ ಇ. ಚನ್ನವೀರಪ್ಪ ಮತ್ತು ಇತರರು –ವಿರುದ್ಧ– ಸಿ.ಬಿ.ಐ., ಬೆಂಗಳೂರು*

ಭಾರತ ಸಂವಿಧಾನದ 226ನೇ ಅನುಚ್ಛೇದದಡಿಯಲ್ಲಿನ ರಿಟ್ ಅರ್ಜಿ.

ದಂಡ ಪ್ರಕ್ರಿಯಾ ಸಂಹಿತೆ 482ನೇ ಪ್ರಕರಣ.

ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರರ ವಿರುದ್ಧ ಭಾರತೀಯ ದಂಡ ಸಂಹಿತೆಯ 120(ಬಿ), 420, 467, 468, 471, 477–ಎ ಮತ್ತು 13(1)(ಡಿ)ನೇ ಪ್ರಕರಣ ಮತ್ತು ಭ್ರಷ್ಟಾಚಾರ ನಿಯಂತ್ರಣ ಅಧಿನಿಯಮ, 13(2)ನೇ ಪ್ರಕರಣದ ಅಡಿ ಸಿಬಿಐರವರು ದಾಖಲಿಸಿದ, ಪ್ರಕರಣವನ್ನು ರದ್ದುಗೊಳಿಸಲು ಪ್ರಾರ್ಥಿಸಿ ಈ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ.

ಪ್ರಸ್ತುತ ಪ್ರಕರಣದಲ್ಲಿ ಬ್ಯಾಂಕಿನಿಂದ ತೆಗೆದುಕೊಂಡ ಸಾಲದ ಹಣವನ್ನು ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಂಡು ಹಣವನ್ನು ದುರುಪಯೋಗಪಡಿಸಿಕೊಂಡ ಆರೋಪವಿದ್ದು ನಂತರದಲ್ಲಿ ಸಾಲದ ಹಣವನ್ನು ಸಂಪೂರ್ಣವಾಗಿ ಮರುಪಾವತಿ ಮಾಡಿದ್ದರೂ ಸಹ ದುರುದ್ದೇಶದ ಅಂಶವಿರುವುದರಿಂದರಿಂದ ಪ್ರತಿವಾದಿ ಸಿಬಿಐನ ವಾದವನ್ನು ಪುರಸ್ಕರಿಸಲಾಗಿದೆ ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳಾದ ತಮಿಳುನಾಡು ರಾಜ್ಯ –ವಿರುದ್ಧ– ಆರ್. ವಾಸಂತಿ ಸ್ಟ್ಯಾನ್ಲಿ, 2016 (1) ಎಸ್‌ಸಿಸಿ 376 ಮತ್ತು ಮಹಾರಾಷ್ಟ್ರ ರಾಜ್ಯ –ವಿರುದ್ಧ– ವಿಕ್ರಮ ಅನಂತರಾಯ ದೋಶಿ (2014) 15 ಎಸ್‌ಸಿ 29 ಗಳಲ್ಲಿ ನೀಡಿದ ನಿರ್ದೇಶನಗಳನ್ನು ಆಧರಿಸಿ ದೂರು ಮತ್ತು ರಾಜಿಯ

*ರಿಟ್ ಅರ್ಜಿ ಸಂಖ್ಯೆ: 109245/2017 ಮತ್ತು ಇತರೆ, ದಿನಾಂಕ 20ನೇ ಮಾರ್ಚ್, 2019.

ಅಂಶಗಳನ್ನು ಪರಿಗಣಿಸಿ, ಈ ಪ್ರಕರಣಗಳಲ್ಲಿ ಮೋಸವು ಕಂಡುಬರುವುದರಿಂದ ಈ ರಿಟ್ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

ಅರ್ಜಿದಾರರ ಪರ ನ್ಯಾಯವಾದಿಗಳು ಹಾಗೂ ಪ್ರತ್ಯರ್ಜಿದಾರರ ಪರ ನ್ಯಾಯವಾದಿಗಳ ವಾದ–ಪ್ರತಿವಾದಗಳನ್ನು ಆಲಿಸಿ, ದೂರು ಹಾಗೂ ಆರೋಪಪಟ್ಟಿಯ ಅಪವಾದವನ್ನು ಗಮನಿಸಿದಾಗ, ಬ್ಯಾಂಕ್ ನೌಕರ ಅಂದರೆ ಆಪಾದಿತ ಸಂಖ್ಯೆ:1 ರೊಂದಿಗೆ ಷಾಮೀಲಾಗಿ ಈ ಅರ್ಜಿದಾರರು ಸರ್ಕಾರಕ್ಕೆ ಸೇರಿದ ಹಣವನ್ನು ಮಾರ್ಗಪಲ್ಲಟಗೊಳಿಸಿ, ದುರುಪಯೋಗಪಡಿಸಿಕೊಂಡಿರುತ್ತಾರೆಂಬ ಆಪಾದನೆ ಮಾಡಿರುವುದು ಕಂಡುಬರುತ್ತದೆ. ಹಾಗಾಗಿ, ದೂರನ್ನು ದಾಖಲಿಸಿ, ಪ್ರಕರಣವನ್ನು ನೋಂದಾಯಿಸಿ, ಆರೋಪಪಟ್ಟಿಯನ್ನು ಸಹ ಸಲ್ಲಿಸಲಾಗಿರುತ್ತದೆ. ಅರ್ಜಿದಾರರ ಪರ ಹಾಜರಾದ ನ್ಯಾಯವಾದಿಗಳು ಉದಾಹರಿಸಿದ ತೀರ್ಪು, ಸಾಲ ಹಾಗೂ ಸಾಲದ ಮರುಸಂದಾಯಕ್ಕೆ ಸಂಬಂಧಿಸಿದಂಥ ಮೊಬಲಗಿಗೆ ಹಾಗೂ ರಾಜಿ ಸಂಧಾನ ಮಾಡಿಕೊಂಡ ಪಕ್ಷಕಾರರಿಗೆ ಸಂಬಂಧಿಸಿದಂಥ ತೀರ್ಪಾಗಿರುತ್ತದೆ. ಹಾಗಾಗಿ, ಸರ್ವೋಚ್ಚ ನ್ಯಾಯಾಲಯವು, ಈ ಹಿಂದೆ ಹೇಳಿದಂಥ ತೀರ್ಪಿನಲ್ಲಿ, ವಿಷಯವನ್ನು ಇತ್ಯರ್ಥಪಡಿಸಿಕೊಳ್ಳಲು ಪಕ್ಷಕಾರರಿಗೆ ಅನುಮತಿಸಿ, ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣಗಳನ್ನು ಅನ್ವಯಿಸಿ, 320ನೇ ಪ್ರಕರಣದ ಉಪಬಂಧವನ್ನು ಗಮನಕ್ಕೆ ತೆಗೆದುಕೊಂಡು ವಿಷಯವನ್ನು ರದ್ದುಪಡಿಸಬೇಕೆಂದು ಅಭಿಪ್ರಾಯಪಟ್ಟಿದೆ. ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸುವುದರೊಂದಿಗೆ ಪ್ರತ್ಯರ್ಜಿದಾರರ ಪರ ಹಾಜರಾದ ನ್ಯಾಯವಾದಿಗಳು (2016) 1 ಎಸ್‌ಸಿಸಿ 376 ಹಾಗೂ (2014) 15 ಎಸ್‌ಸಿ 29ರಲ್ಲಿ ವರದಿಯಾದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಲಾಗಿರುತ್ತದೆ ಹಾಗೂ ಸರ್ವೋಚ್ಚ ನ್ಯಾಯಾಲಯವು, ವಂಚನೆಯನ್ನು ಆಪಾದಿಸಿದಾಗ, ವಂಚನೆಯು ಒಟ್ಟಾರೆ ಸಮಾಜದ ವಿರುದ್ಧ ಅಪರಾಧಗಳಿಗೆ ಸಂಬಂಧಿಸಿದವಾಗಿರುತ್ತವೆ ಹಾಗೂ ಇದು ಒಬ್ಬ ವ್ಯಕ್ತಿಗೆ ವಿರುದ್ಧವಾಗಿದ್ದಲ್ಲಿ, ಆಗ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣವನ್ನು ಅನ್ವಯಿಸಬಹುದಾಗಿರುತ್ತದೆ ಹಾಗೂ ಒಟ್ಟಾರೆಯಾಗಿ ಅಪರಾಧವು ಸಮಾಜದ ವಿರುದ್ಧವಾಗಿದ್ದಲ್ಲಿ, ರಿಟ್ ವ್ಯವಹರಣೆಗಳು ಅಥವಾ ವ್ಯವಹರಣೆಗಳ ರದ್ದತಿಯನ್ನು ಮಾಡಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.

ಅರ್ಜಿದಾರರ ಪರ ನ್ಯಾಯವಾದಿಗಳು ಹಾಗೂ ಇಲ್ಲಿನ ಪ್ರತ್ಯರ್ಜಿದಾರರ ಪರ ನ್ಯಾಯವಾದಿಗಳು ಉದಾಹರಿಸಿದಂಥ ಈ ಹಿಂದೆ ಉಲ್ಲೇಖಿಸಿದ ತೀರ್ಪುಗಳನ್ನು ವಿಧಿಸಿದ ತತ್ವಗಳನ್ನು ಪರಿಗಣಿಸಿದಾಗ, ಈ ಅರ್ಜಿದಾರರು ಬ್ಯಾಂಕ್‌ನ ಉದ್ಯೋಗಿಯಾಗಿದ್ದಂಥ ಆಪಾದಿತ ಸಂಖ್ಯೆ.1ರ ಸೇವೆಯ ಅವಕಾಶದ ಲಾಭ ಪಡೆದುಕೊಂಡು ಆತನೊಂದಿಗೆ ಷಾಮೀಲಾಗಿ, ಬೇರೆ ಬೇರೆ ಸಂದರ್ಭಗಳ ಮೇಲೆ ಸರ್ಕಾರದ ನಿಧಿಗಳ ಹಣವನ್ನು ಮಾರ್ಗಾಂತರ ಮಾಡಿರುತ್ತಾರೆಂದೂ ಈ ದೂರಿನಲ್ಲಿ ಹಾಗೂ ಆರೋಪಪಟ್ಟಿಯಲ್ಲಿ ಆಪಾದನೆಯನ್ನು ಮಾಡಿರುತ್ತಾರೆಂದು ಆಪಾದಿಸಿರುತ್ತಾರೆ. ಅಲ್ಲದೆ, ಪ್ರತ್ಯರ್ಜಿದಾರ ಪರ ಮಾನ್ಯ ವಕೀಲರು ಈ ಮಾರ್ಗಪಲ್ಲಟವು ಕೇವಲ ಒಂದು ಅಥವಾ ಎರಡು ಬಾರಿಯಾಗದೆ ಆ ಅವಧಿಯಲ್ಲಿ 36 ಸಂದರ್ಭಗಳಲ್ಲಿಯಾಗಿದೆಯೆಂದೂ, ಮೊಬಲಗಿನ ಮರು ಸಂದಾಯವು ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸುವುದನ್ನು ಆಧರಿಸಿರಲಿಲ್ಲವೆಂದೂ ಈ ನ್ಯಾಯಾಲಯದ ಗಮನಕ್ಕೆ ತಂದಿರುತ್ತಾರೆ. ದೂರಿನಲ್ಲಿ ಮಾಡಿರುವ ಆಪಾದನೆಗಳು ಹಾಗೂ ಈ ಅರ್ಜಿದಾರರ ವಿರುದ್ಧ ಮಾಡಲಾದ ಆಪಾದನೆಗಳು ಹಾಗೂ ಆರೋಪಗಳ ಪರಿಶೀಲನೆಯನ್ನು ಗಮನಕ್ಕೆ ತೆಗೆದುಕೊಂಡು, ಅರ್ಜಿದಾರರ ಪರ ವಕೀಲರು, ಈ ಅರ್ಜಿದಾರರು ಸರ್ಕಾರಿ ಉದ್ಯೋಗಿಗಳಲ್ಲವೆಂದು ವಾದಿಸಿದ್ದಾಗ್ಯೂ, ಈ ಅರ್ಜಿದಾರರ ವಿರುದ್ಧ ಇತರೆ ಅಪರಾಧಗಳನ್ನು ಅನ್ವಯಿಸಲಾಯಿತೆಂದು ಗಮನಿಸಬೇಕಾಗಿರುತ್ತದೆ. ಹಾಗಾಗಿ, ಈತನ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ. ದಾಖಲೆ ಮೇಲಿನ ವಸ್ತು ವಿಷಯವನ್ನು ಅಲ್ಲದೆ ಈ ಅರ್ಜಿದಾರರ ವಿರುದ್ಧ ಮಾಡಿದ ಆಪಾದನೆಗಳನ್ನು ಪರಿಗಣಿಸಿದಾಗ, ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿ ರಿಟ್ ಅಧಿಕಾರ ವ್ಯಾಪ್ತಿಯನ್ನು ಹಾಗೂ ಅಧಿಕಾರಗಳನ್ನು ಚಲಾಯಿಸಲು ಇದು ಯುಕ್ತ ಪ್ರಕರಣವಾಗಿರುವುದಿಲ್ಲ ಹಾಗೂ ವಂಚನೆಯನ್ನು ಆಪಾದಿಸಿದಾಗ ಹಾಗೂ ಆಪಾದನೆಯ ಒಟ್ಟಾರೆಯಾಗಿ ಸಮಾಜಕ್ಕೆ ಸಂಬಂಧಿಸಿದ್ದಾಗ ಈ ಪ್ರಕರಣಗಳಲ್ಲಿನ ವಿವಾದಿತ ವಾಸ್ತವಾಂಶದ ಪ್ರಶ್ನೆಯನ್ನು ನಿರ್ಧರಿಸಲಾಗುವುದಿಲ್ಲ. ಹಾಗಾಗಿ, ಇದು, ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳನ್ನು ಅನ್ವಯಿಸಿ ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸಿಲು ಯುಕ್ತ ಪ್ರಕರಣವಾಗಿರುವುದಿಲ್ಲ.

ಆದ್ದರಿಂದ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. ನಿಖಿಲ್ ಮರ್ಚ್ಂಟ್ –ವಿರುದ್ಧ–*
*ಕೇಂದ್ರ ತನಿಖಾ ದಳ ಹಾಗೂ ಮತ್ತೊಬ್ಬರು (ಉಲ್ಲೇ) 4*
*2. (2014) 5 ಎಸ್‌ಸಿಸಿ 364*
*ಕೇಂದ್ರ ತನಿಖಾದಳ, ಎಸಿಬಿ, ಮುಂಬೈ –ವಿರುದ್ಧ–*
*ನರೇಂದ್ರ ಲಾಲ್ ಜೈನ್ ಹಾಗೂ ಇತರರು (ಉಲ್ಲೇ) 5*
*3. (2016) 1 ಎಸ್‌ಸಿಸಿ 376*
*ತಮಿಳುನಾಡು ಸರ್ಕಾರ –ವಿರುದ್ಧ–*
*ಆರ್. ವಾಸಂತಿ ಸ್ಟಾನ್ಲಿ ಹಾಗೂ ಮತ್ತೊಬ್ಬರು (ಉಲ್ಲೇ) 7*
*4. (2014) 15 ಎಸ್‌ಸಿ 29*
*ಮಹಾರಾಷ್ಟ್ರ ಸರ್ಕಾರ –ವಿರುದ್ಧ–*
*ವಿಕ್ರಂ ಅನಂತರಾಯ ದೋಶಿ (ಉಲ್ಲೇ) 7*

ಅರ್ಜಿದಾರರ ಪರ: ಶ್ರೀ ಪ್ರಶಾಂತ್ ಟಿ. ಅರೆಗೂಲಿ, ವಕೀಲರು.
ಪ್ರತ್ಯರ್ಜಿದಾರರ ಪರ: ಶ್ರೀ ಎಂ.ಬಿ. ಕಣವಿ, ವಕೀಲರು.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಎಚ್.ಪಿ. ಸಂದೇಶ್:**

ನಾನು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ಹಾಗೂ ಪ್ರತ್ಯರ್ಜಿದಾರ ಕೇಂದ್ರ ಸರ್ಕಾರದ ಪರ ಮಾನ್ಯ ವಿಶೇಷ ನ್ಯಾಯವಾದಿಗಳ ವಾದವನ್ನು ಆಲಿಸಿರುತ್ತೇನೆ.

2. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ರ ಓದಿನೊಂದಿಗೆ ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳನ್ನು ಅನ್ವಯಿಸಿ ಈ ರಿಟ್ ಅರ್ಜಿಗಳನ್ನು

ಸಲ್ಲಿಸುವ ಮೂಲಕ ಅರ್ಜಿದಾರರು, IIIನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯಗಳ ನ್ಯಾಯಾಧೀಶರು ಹಾಗೂ ಲೋಕಾಯುಕ್ತ/ಆಪಾದಿತರು ಹಾಗೂ ಸಿಬಿಐ ಧಾರವಾಡದ ವಿಶೇಷ ನ್ಯಾಯಾಧೀಶರ ಕಡತದ ಮೇಲಿನ ವಿಶೇಷ ಸಿಬಿಐ ಸಿಸಿ ಸಂಖ್ಯೆ: 2/2014ರಲ್ಲಿನ ಅನುಬಂಧ–ಎ ಮೇರೆಗೆ ದಿನಾಂಕ: 30.06.2017ರಂದಿನ ಆದೇಶವನ್ನು ರದ್ದುಪಡಿಸಲು ಹಾಗೂ ತಿರಸ್ಕರಿಸಿದಂಥ ಬಿಡುಗಡೆಗಾಗಿ ಸಲ್ಲಿಸಿದ ಅರ್ಜಿಯನ್ನು ಅಂಗೀಕರಿಸುವ ಮೂಲಕ ಅರ್ಜಿದಾರರನ್ನು ಬಿಡುಗಡೆಗೊಳಿಸಲು ಹಾಗೂ ಪ್ರಕರಣದ ಸಂದರ್ಭಗಳಲ್ಲಿ ಯುಕ್ತವೆಂದು ಭಾವಿಸುವಂಥ ಇತರೆ ಆದೇಶಗಳನ್ನು ಹೊರಡಿಸಲು ಕೋರಿರುತ್ತಾರೆ.

3. ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದ 13(1)(ಡಿ) ಹಾಗೂ 13(2)ನೇ ಪ್ರಕರಣಗಳೊಂದಿಗೆ ಓದಲಾದ ಭಾರತ ದಂಡ ಸಂಹಿತೆಯ 120(ಬಿ), 420, 467, 468, 471, 477–ಎ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಅರ್ಜಿದಾರರು ಹಾಗೂ ಇತರರ ವಿರುದ್ಧ ಆರ್‌ಸಿ 11(ಎ) / 2011ರಲ್ಲಿ ಪ್ರಥಮ ಮಾಹಿತಿ ವರದಿಯನ್ನು ನೋಂದಾಯಿಸಿಲಾಯಿತೆಂಬುದು ಪ್ರಕರಣದ ವಾಸ್ತವಿಕಾಂಶವಾಗಿರುತ್ತದೆ. ಸಂಖ್ಯೆ: 1 ರಿಂದ 4ರವರೆಗಿನ ಆಪಾದಿತರು ಮೇಲಿನ ಅಪರಾಧಗಳನ್ನು ಎಸಗಲು ಸಹಾಯಕ ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಇಳಕಲ್ ಶಾಖೆ ಇವರೊಂದಿಗೆ ಕ್ರಿಮಿನಲ್ ಪಿತೂರಿಯನ್ನು ನಡೆಸಿರುತ್ತಾರೆಂದು ಪ್ರಾಸಿಕ್ಯೂಷನ್ ಆಪಾದಿಸಿರುತ್ತದೆ. ಆಪಾದಿತ ಸಂಖ್ಯೆ:1 ಸರ್ಕಾರದ ಲೆಕ್ಕಖಾತೆಗಳಿಗೆ ಜಮೆ ಮಾಡಬೇಕಾಗಿದ್ದಂಥ ಕೆಲವು ಜಮೆಗಳನ್ನು ಅರ್ಜಿದಾರ ಸಂಖ್ಯೆ:1 ರಿಂದ 3ರ ಲೆಕ್ಕ ಖಾತೆಗೆ ತಪ್ಪಾಗಿ ಜಮೆ ಮಾಡಿರುತ್ತಾರೆ. ಇಂಥದೇ ಘಟನೆಗಳನ್ನು ಆಪಾದಿತ ಸಂಖ್ಯೆ:1 ಎಸಗಿದ್ದು ಒಟ್ಟು 36 ಸಂದರ್ಭಗಳಲ್ಲಿ, ಮೊಬಲಗನ್ನು ವರ್ಗಾವಣೆ ಮಾಡಿದ್ದು, ತರುವಾಯ ಇದು ವ್ಯತಿರಿಕ್ತವಾಗಿದ್ದು, ಮೊಬಲಗನ್ನು ಲೆಕ್ಕ ಖಾತೆಗಳ ಧಾರಕರು ಸಂದಾಯ ಮಾಡಿರುತ್ತಾರೆ. ನಿಧಿಯನ್ನು ಉದ್ದೇಶಪೂರ್ವಕವಾಗಿ ಮಾರ್ಗ ಪಲ್ಲಟ ಮಾಡಿದಾಗ, ಸದರಿ ಮಾರ್ಗಪಲ್ಲಟವಾಗಿ ಮಾರ್ಗ ಪಲ್ಲಟ ಮಾಡಿದಾಗ, ಸದರಿ ಮಾರ್ಗಪಲ್ಲಟವು ಯಾಂತ್ರಿಕವಾಗಿ ಆಗಿರುವಂತಹುದಲ್ಲ. ಈ ಅರ್ಜಿದಾರರ ವಿರುದ್ಧದ ವ್ಯವಹರಣೆಗಳನ್ನು ಆರಂಭಿಸುವುದು

ದೋಷಪೂರ್ಣವಾಗಿರುತ್ತದೆ ಹಾಗೂ ಸರ್ಕಾರಿ ಮೊಬಲಗನ್ನು ಬಳಸುವ ಯಾವುದೇ ಕ್ರಿಮಿನಲ್ ಉದ್ದೇಶವಿರುವುದಿಲ್ಲ. ಹಾಗಾಗಿ, ಅರ್ಜಿದಾರರ ವಿರುದ್ಧದ ವ್ಯವಹರಣೆಗಳ ಈ ಉದ್ದೇಶವು ಪ್ರಕ್ರಿಯೆಯ ದುರುಪಯೋಗವಲ್ಲದೆ ಮತ್ತೇನೂ ಅಲ್ಲ. ಅರ್ಜಿಯನ್ನು ಅರ್ಜಿದಾರರ ಬಿಡುಗಡೆಗೆ ಸಂಬಂಧಿಸಿದಂತೆ ನ್ಯಾಯಾಲಯದ ಮುಂದೆ ಸಲ್ಲಿಸಿದ್ದು, ಇದನ್ನು ಅಧೀನ ನ್ಯಾಯಾಲಯವು ತಿರಸ್ಕರಿಸಿರುತ್ತದೆ.

4. ಪ್ರಶ್ನಿತ ಆದೇಶವು ಕಾನೂನು ಬಾಹಿರವು ಹಾಗೂ ಕಾನೂನಿಗೆ ವಿರುದ್ಧವೂ, 420ಯ ಅಪರಾಧವನ್ನು ರೂಪಿಸಲಾಗಿರುವುದಿಲ್ಲವೆಂಬುದು ಹಾಗೂ ಬ್ಯಾಂಕ್‌ನಿಂದ ಯಾವುದೇ ಪತ್ರವನ್ನು ಹೊರಡಿಸಿರುವುದಿಲ್ಲವೆಂದು ಹಾಗೂ ***ನಿಖಿಲ್ ಮರ್ಚಂಟ್ –ವಿರುದ್ಧ– ಕೇಂದ್ರ ತನಿಖಾ ದಳದ*** ಪ್ರಕರಣದಲ್ಲಿ ಗಮನಿಸಲಾದಂತೆ ಆಪಾದನೆಗಳನ್ನು ಹಿಂಪಡೆಯಲಾಗಿರುತ್ತದೆಂಬ ಆಧಾರದ ಮೇಲೆ ಅಧೀನ ನ್ಯಾಯಾಲಯವು ಅರ್ಜಿಯನ್ನು ತಿರಸ್ಕರಿಸಿರುತ್ತದೆಂಬುದು ಅರ್ಜಿಗಳಲ್ಲಿನ ಅರ್ಜಿದಾರರ ವಾದವಾಗಿರುತ್ತದೆ. ***ನಿಖಿಲ್*** ಪ್ರಕರಣದ ತೀರ್ಪು ಅನ್ವಯವಾಗುವುದಿಲ್ಲ ಹಾಗೂ ಅಧೀನ ನ್ಯಾಯಾಲಯವು ತಪ್ಪನ್ನು ಎಸಗಿದೆಯೆಂಬುದು ಅಧಿವಿಚಾರಣಾ ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ಆಪಾದಿತರು ಸುಳ್ಳು ದಸ್ತಾವೇಜುಗಳನ್ನು ಸೃಜಿಸಿದ್ದು ಇದನ್ನು ದೃಷ್ಟಿಯಲ್ಲಿಟ್ಟುಕೊಂಡೇ ಯಾವುದೇ ದಸ್ತಾವೇಜನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲವೆಂಬುದು ಪ್ರಾಸಿಕ್ಯೂಷನ್‌ನ ವಾದವಾಗಿರುತ್ತದೆ. ಹಾಗಾಗಿ, ಪ್ರಶ್ನಿತ ಆದೇಶವು ಸರ್ಷಿಯೋರರಿ ರಿಟ್ ಅನ್ನು ಹೊರಡಿಸುವ ಮೂಲಕ ರದ್ದುಪಡಿಸಲು ಬದ್ಧವಾಗಿದ್ದು ಅರ್ಜಿದಾರರನ್ನು ಬಿಡುಗಡೆಗೊಳಿಸಲು ಈ ನ್ಯಾಯಾಲಯವನ್ನು ಕೋರಿರುತ್ತಾರೆ.

5. ಅರ್ಜಿದಾರರ ಪರ ಮಾನ್ಯ ವಕೀಲರು, ತಮ್ಮ ವಾದಗಳಲ್ಲಿ, ***ನಿಖಿಲ್ ಮರ್ಚ್‌ಂಟ್ –ವಿರುದ್ಧ– ಕೇಂದ್ರ ತನಿಖಾ ದಳ ಹಾಗೂ ಮತ್ತೊಬ್ಬರು***' ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಪಕ್ಷಕಾರರ ನಡುವೆ ರಾಜಿ ಸಂಧಾನ ಆಗಿರುವುದರಿಂದ ದಂಡ ಪ್ರಕ್ರಿಯಾ ಸಂಹಿತೆಯ 320ನೇ ಪ್ರಕರಣದ ಉಪಬಂಧವನ್ನು ಗಮನಕ್ಕೆ ತೆಗೆದುಕೊಂಡು ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿನ

ಕಾರ್ಯವಿಧಾನವನ್ನು ರದ್ದುಪಡಿಸಿರುತ್ತದೆಂದು ತೀವ್ರವಾಗಿ ವಾದಿಸಿರುತ್ತಾರೆ. ಅರ್ಜಿದಾರರ ಪರ ವಕೀಲರು ***ಕೇಂದ್ರ ತನಿಖಾ ದಳ, ಎಸಿಬಿ, ಮುಂಬೈ –ವಿರುದ್ಧ – ನರೇಂದ್ರ ಲಾಲ್ ಜೈನ್ ಹಾಗೂ ಇತರರು***[2] ಪ್ರಕರಣದಲ್ಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಿರುತ್ತದೆ. ಅದರಲ್ಲಿ ಸರ್ವೋಚ್ಚ ನ್ಯಾಯಾಲಯವು, ತನ್ನ ತೀರ್ಪಿನಲ್ಲಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣವನ್ನು ಸಹ ಅನ್ವಯಿಸಿರುತ್ತದೆ ಹಾಗೂ 320ನೇ ಪ್ರಕರಣದ ಪರಂತುಕವನ್ನು ಗಮನಕ್ಕೆ ತೆಗೆದುಕೊಂಡು, ರಾಜಿ ಸಂಧಾನದ ಆಧಾರದ ಮೇಲೆ ರಾಜಿ ಮಾಡಿಕೊಳ್ಳಲು ಸಾಧ್ಯವಾಗದ ಅಪರಾಧಗಳ ಸಂಬಂಧದಲ್ಲಿನ ವ್ಯವಹರಣೆಗಳನ್ನು ರದ್ದುಪಡಿಸಿ, ಇದನ್ನು ವಾರಂಟು ಮಾಡಿದಾಗ ಚರ್ಚಿಸಲಾಗಿರುತ್ತದೆ.

6. ಇದಕ್ಕೆ ವಿರುದ್ಧವಾಗಿ, ಪ್ರತ್ಯರ್ಜಿದಾರರ ಪರ ಹಾಜರಾದ ವಿಶೇಷ ವಕೀಲರು, ಪ್ರಸ್ತುತ ಪ್ರಕರಣದಲ್ಲಿ ಯಾವುದೇ ರಾಜಿ ಸಂಧಾನವಿರುವುದಿಲ್ಲ ಹಾಗೂ ವ್ಯವಹರಣೆಯ ಏಕ ವ್ಯವಹರಣೆಯಾಗಿರುವುದಿಲ್ಲ. ಅಲ್ಲಿ 36 ವ್ಯವಹರಣೆಗಳಿದ್ದು, ಬೇರೆ ಬೇರೆ ಸಂದರ್ಭಗಳಲ್ಲಿ ಹಣವನ್ನು ಮಾರ್ಗ ಪಲ್ಲಟ ಗೊಳಿಸಲಾಗಿರುತ್ತದೆಂದೂ, ಇಲ್ಲಿನ ಪಕ್ಷಕಾರರು ಸದರಿ ಮೊಬಲಗನ್ನು ಬಳಸಿಕೊಂಡು ಮೊಬಲಗನ್ನು ವಿಪರ್ಯಯಗೊಳಿಸಿದ್ದಾರೆಂಬ ಒಂದೇ ಕಾರಣಕ್ಕೆ ವ್ಯವಹರಣೆಗಳನ್ನು ರದ್ದುಪಡಿಸಬಾರದೆಂದು ತೀವ್ರವಾಗಿ ತಮ್ಮ ವಾದವನ್ನು ಮಂಡಿಸಿರುತ್ತಾರೆ. ಈ ಅರ್ಜಿದಾರರು ಆಪಾದಿತ ಸಂಖ್ಯೆ:1 ರೊಂದಿಗೆ ಷಾಮೀಲಾಗಿ, ಈ ಅರ್ಜಿದಾರರಿಂದ ಸದರಿ ಮೊಬಲಗನ್ನು ಬಳಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಸರ್ಕಾರಿ ನಿಧಿಯನ್ನು ಮಾರ್ಗಪಲ್ಲಟಿಸಿರುತ್ತಾರೆಂಬುದು ಪ್ರತ್ಯರ್ಜಿದಾರರ ಮುಖ್ಯವಾದವಾಗಿರುತ್ತದೆ. ಹಾಗಾಗಿ, ಈ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣವನ್ನು ಅನ್ವಯಿಸಿರುವುದಿಲ್ಲ ಹಾಗೂ ಪಕ್ಷಕಾರರ ನಡುವೆ ಯಾವುದೇ ರಾಜೀ ಸಂಧಾನವನ್ನು ಮಾಡಲಾಗುವುದಿಲ್ಲ. ಅರ್ಜಿದಾರರು ಹಾಜರುಪಡಿಸಿದಂಥ ದಸ್ತಾವೇಜುಗಳು ಅಂದರೆ ಬ್ಯಾಂಕ್ ನೀಡಿದಂಥ ಬೇಬಾಕಿ ಪತ್ರವು ವಿವಾದಿತ ದಸ್ತಾವೇಜಾಗಿದ್ದು ಈ

2. (2014) 5 ಎಸ್‌ಸಿಸಿ 364

ನ್ಯಾಯಾಲಯದ ಎದುರು ಪ್ರತ್ಯರ್ಜಿದಾರರೂ ಸಹ ವರದಿಯನ್ನು ಸಲ್ಲಿಸಿರುತ್ತಾರೆ. ವಿವಾದಿತ ದಸ್ತಾವೇಜು ಅಲ್ಲಿರುವಾಗ, ಈ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸಲಾಗುವುದಿಲ್ಲ. ಹಾಗಾಗಿ ಅರ್ಜಿಯನ್ನು ವಜಾಗೊಳಿಸಲು ಈ ನ್ಯಾಯಾಲಯವನ್ನು ಕೋರಲಾಗಿರುತ್ತದೆ.

7. ತಮ್ಮ ವಾದಕ್ಕೆ ಉತ್ತರವಾಗಿ, ಇವರು ***ತಮಿಳುನಾಡು ಸರ್ಕಾರ –ವಿರುದ್ಧ– ಆರ್. ವಾಸಂತಿ ಸ್ಟಾನ್ಲಿ ಹಾಗೂ ಮತ್ತೊಬ್ಬರು***[3] ಪ್ರಕರಣದಲ್ಲಿ ಸಂಬಂಧಿಸಿದ ತೀರ್ಪನ್ನು ಉದಾಹರಿಸಿರುತ್ತಾರೆ. ಅದರಲ್ಲಿ ಹಣಕಾಸು ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಂಡು ಕ್ರಿಮಿನಲ್ ವ್ಯವಹರಣೆಗಳನ್ನು ರದ್ದುಪಡಿಸಿದ್ದಲ್ಲಿ, ಅದು ವ್ಯವಹರಣೆಗಳನ್ನು ರದ್ದುಪಡಿಸಿಕೊಳ್ಳಲು ಆಧಾರವಾಗುವುದಿಲ್ಲವೆಂಬ ಅಭಿಪ್ರಾಯವಿರುತ್ತದೆ. ***ಮಹಾರಾಷ್ಟ್ರ ಸರ್ಕಾರ –ವಿರುದ್ಧ– ವಿಕ್ರಂ ಅನಂತರಾಯ ದೋಶಿ***[4] ಪ್ರಕರಣದಲ್ಲಿ ಕ್ರಿಮಿನಲ್ ಅಪೀಲು ಸಂಖ್ಯೆ: 2048/2014ರಲ್ಲಿ ನೀಡಿದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಿರುತ್ತಾರೆ. ಇದರಲ್ಲಿ, ಉಚ್ಚ ನ್ಯಾಯಾಲಯವು, ಪಕ್ಷಕಾರರ ನಡುವಿನ ಇತ್ಯರ್ಥದ ಆಧಾರದ ಮೇಲೆ ಕ್ರಿಮಿನಲ್ ವ್ಯವಹರಣೆಯನ್ನು ರದ್ದುಪಡಿಸಲು ತನ್ನಲ್ಲಿ ಅಂತರ್ನಿಹಿತವಾಗಿದ್ದ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವುದನ್ನು ಸಮರ್ಥಿಸಿಕೊಂಡಲ್ಲಿ, ತನಿಖಾ ಏಜೆನ್ಸಿಯು ಆಪಾದಿಸಿದಂಥ ರೀತಿಯಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಹಣವನ್ನು ಪಡೆದಿದೆಯೆಂದು ಸ್ಪಷ್ಟವಾಗಿ ವಿತ್ತೀಯ ಅಪವಿತ್ರತೆಯನ್ನು ವಿಷದಪಡಿಸಿದಲ್ಲಿ ಹಾಗೂ ಆರೋಪಪಟ್ಟಿಯಲ್ಲಿ ನಿರೂಪಿಸಿದಂಥ ಹಣಕಾಸು ವಂಚನೆ ಕಾರ್ಯನೀತಿ ರೂಪದಲ್ಲಿ, ಅದನ್ನು ವ್ಯಕ್ತಿಗತವಾಗಿ ಅಥವಾ ವೈಯಕ್ತಿಕ ದೋಷವೆಂದು ನೋಡಲಾಗದೆ, ಇದನ್ನು ಸಮಾಜಕ್ಕೆ ಎಸಗಿದ ದೋಷವೆಂದು ಹಾಗೂ ಇದು ಸಾಮಾಜಿಕ ಪ್ರಭಾವವನ್ನು ಹೊಂದಿರುತ್ತದೆಂದೂ, ಹಾಗಾಗಿ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣವನ್ನು ಅನ್ವಯಿಸಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.

3. (2016) 1 ಎಸ್‌ಸಿಸಿ 376
4. (2014) 15 ಎಸ್‌ಸಿ 29

8. ಈ ಎರಡೂ ತೀರ್ಮಗಳನ್ನು ಉದಾಹರಿಸಿ, ಮಾನ್ಯ ವಕೀಲರು, ಈ ವಂಚನೆ ಸಮಾಜಕ್ಕೆ ಎಸಗಿದ ವಂಚನೆಯಾಗಿದೆಯೇ ಹೊರತು ಒಬ್ಬ ವ್ಯಕ್ತಿಯ ವಿರುದ್ಧ ಎಸಗಿದ ವಂಚನೆಯಲ್ಲವೆಂದೂ ಹಣಕಾಸು ಸಂಸ್ಥೆಗೆ ವಂಚನೆಯನ್ನು ಎಸಗುವ ಮೂಲಕ, ಅಪಾದಿತ ಸಂ.1ರೊಂದಿಗೆ ಷಾಮೀಲಾಗಿ ಈ ಅರ್ಜಿದಾರರು ಹಣವನ್ನು ದುರ್ಬಳಕೆ ಮಾಡಿಕೊಂಡಿರುತ್ತಾರೆ. ಹಾಗಾಗಿ, ಈ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿ ಹಾಗೂ ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿನ ವ್ಯವಹರಣೆಗಳನ್ನು ರದ್ದುಪಡಿಸಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.

9. ಅರ್ಜಿದಾರರ ಪರ ನ್ಯಾಯವಾದಿಗಳು ಹಾಗೂ ಪ್ರತ್ಯರ್ಜಿದಾರರ ಪರ ನ್ಯಾಯವಾದಿಗಳ ವಾದ–ಪ್ರತಿವಾದಗಳನ್ನು ಆಲಿಸಿ, ದೂರು ಹಾಗೂ ಆರೋಪಪಟ್ಟಿಯ ಅಪವಾದವನ್ನು ಗಮನಿಸಿದಾಗ, ಬ್ಯಾಂಕ್ ನೌಕರ ಅಂದರೆ ಆಪಾದಿತ ಸಂಖ್ಯೆ:1 ರೊಂದಿಗೆ ಷಾಮೀಲಾಗಿ ಈ ಅರ್ಜಿದಾರರು ಸರ್ಕಾರಕ್ಕೆ ಸೇರಿದ ಹಣವನ್ನು ಮಾರ್ಗಪಲ್ಲಟಗೊಳಿಸಿ, ದುರುಪಯೋಗಪಡಿಸಿಕೊಂಡಿರುತ್ತಾರೆಂಬ ಆಪಾದನೆ ಮಾಡಿರುವುದು ಕಂಡುಬರುತ್ತದೆ. ಹಾಗಾಗಿ, ದೂರನ್ನು ದಾಖಲಿಸಿ, ಪ್ರಕರಣವನ್ನು ನೋಂದಾಯಿಸಿ, ಆರೋಪಪಟ್ಟಿಯನ್ನು ಸಹ ಸಲ್ಲಿಸಲಾಗಿರುತ್ತದೆ. ಅರ್ಜಿದಾರರ ಪರ ಹಾಜರಾದ ನ್ಯಾಯವಾದಿಗಳು ಉದಾಹರಿಸಿದ ತೀರ್ಮ, ಸಾಲ ಹಾಗೂ ಸಾಲದ ಮರುಸಂದಾಯಕ್ಕೆ ಸಂಬಂಧಿಸಿದಂಥ ಮೊಬಲಗಿಗೆ ಹಾಗೂ ರಾಜಿ ಸಂಧಾನ ಮಾಡಿಕೊಂಡ ಪಕ್ಷಕಾರರಿಗೆ ಸಂಬಂಧಿಸಿದಂಥ ತೀರ್ಪಾಗಿರುತ್ತದೆ. ಹಾಗಾಗಿ, ಸರ್ವೋಚ್ಚ ನ್ಯಾಯಾಲಯವು, ಈ ಹಿಂದೆ ಹೇಳಿದಂಥ ತೀರ್ಪಿನಲ್ಲಿ, ವಿಷಯವನ್ನು ಇತ್ಯರ್ಥಪಡಿಸಿಕೊಳ್ಳಲು ಪಕ್ಷಕಾರರಿಗೆ ಅನುಮತಿಸಿ, ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣಗಳನ್ನು ಅನ್ವಯಿಸಿ, 320ನೇ ಪ್ರಕರಣದ ಉಪಬಂಧವನ್ನು ಗಮನಕ್ಕೆ ತೆಗೆದುಕೊಂಡು ವಿಷಯವನ್ನು ರದ್ದುಪಡಿಸಬೇಕೆಂದು ಅಭಿಪ್ರಾಯಪಟ್ಟಿದೆ. ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸುವುದರೊಂದಿಗೆ ಪ್ರತ್ಯರ್ಜಿದಾರರ ಪರ ಹಾಜರಾದ ನ್ಯಾಯವಾದಿಗಳು ***(2016) 1 ಎಸ್‌ಸಿಸಿ 376*** ಹಾಗೂ ***(2014) 15 ಎಸ್‌ಸಿ 29***ರಲ್ಲಿ ವರದಿಯಾದ

ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಲಾಗಿರುತ್ತದೆ ಹಾಗೂ ಸರ್ವೋಚ್ಚ ನ್ಯಾಯಾಲಯವು, ವಂಚನೆಯನ್ನು ಆಪಾದಿಸಿದಾಗ, ವಂಚನೆಯು ಒಟ್ಟಾರೆ ಸಮಾಜದ ವಿರುದ್ಧ ಅಪರಾಧಗಳಿಗೆ ಸಂಬಂಧಿಸಿದವಾಗಿರುತ್ತವೆ ಹಾಗೂ ಇದು ಒಬ್ಬ ವ್ಯಕ್ತಿಗೆ ವಿರುದ್ಧವಾಗಿದ್ದಲ್ಲಿ, ಆಗ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣವನ್ನು ಅನ್ವಯಿಸಬಹುದಾಗಿರುತ್ತದೆ ಹಾಗೂ ಒಟ್ಟಾರೆಯಾಗಿ ಅಪರಾಧವು ಸಮಾಜದ ವಿರುದ್ಧವಾಗಿದ್ದಲ್ಲಿ, ರಿಟ್ ವ್ಯವಹರಣೆಗಳು ಅಥವಾ ವ್ಯವಹರಣೆಗಳ ರದ್ಧತಿಯನ್ನು ಮಾಡಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.

10. ಅರ್ಜಿದಾರರ ಪರ ನ್ಯಾಯವಾದಿಗಳು ಹಾಗೂ ಇಲ್ಲಿನ ಪ್ರತ್ಯರ್ಜಿದಾರರ ಪರ ನ್ಯಾಯವಾದಿಗಳು ಉದಾಹರಿಸಿದಂಥ ಈ ಹಿಂದೆ ಉಲ್ಲೇಖಿಸಿದ ತೀರ್ಪುಗಳನ್ನು ವಿಧಿಸಿದ ತತ್ವಗಳನ್ನು ಪರಿಗಣಿಸಿದಾಗ, ಈ ಅರ್ಜಿದಾರರು ಬ್ಯಾಂಕ್‌ನ ಉದ್ಯೋಗಿಯಾಗಿದ್ದಂಥ ಆಪಾದಿತ ಸಂಖ್ಯೆ.1ರ ಸೇವೆಯ ಅವಕಾಶದ ಲಾಭ ಪಡೆದುಕೊಂಡು ಆತನೊಂದಿಗೆ ಷಾಮೀಲಾಗಿ, ಬೇರೆ ಬೇರೆ ಸಂದರ್ಭಗಳ ಮೇಲೆ ಸರ್ಕಾರದ ನಿಧಿಗಳ ಹಣವನ್ನು ಮಾರ್ಗಾಂತರ ಮಾಡಿರುತ್ತಾರೆಂದೂ ಈ ದೂರಿನಲ್ಲಿ ಹಾಗೂ ಆರೋಪಪಟ್ಟಿಯಲ್ಲಿ ಆಪಾದನೆಯನ್ನು ಮಾಡಿರುತ್ತಾರೆಂದು ಆಪಾದಿಸಿರುತ್ತಾರೆ. ಅಲ್ಲದೆ, ಪ್ರತ್ಯರ್ಜಿದಾರ ಪರ ಮಾನ್ಯ ವಕೀಲರು ಈ ಮಾರ್ಗಪಲ್ಲಟವು ಕೇವಲ ಒಂದು ಅಥವಾ ಎರಡು ಭಾರಿಯಾಗದೆ ಆ ಅವಧಿಯಲ್ಲಿ 36 ಸಂದರ್ಭಗಳಲ್ಲಿಯಾಗಿದೆಯೆಂದೂ, ಮೊಬಲಗಿನ ಮರು ಸಂದಾಯವು ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸುವುದನ್ನು ಆಧರಿಸಿರಲಿಲ್ಲವೆಂದೂ ಈ ನ್ಯಾಯಾಲಯದ ಗಮನಕ್ಕೆ ತಂದಿರುತ್ತಾರೆ. ದೂರಿನಲ್ಲಿ ಮಾಡಿರುವ ಆಪಾದನೆಗಳು ಹಾಗೂ ಈ ಅರ್ಜಿದಾರರ ವಿರುದ್ಧ ಮಾಡಲಾದ ಆಪಾದನೆಗಳು ಹಾಗೂ ಆರೋಪಗಳ ಪರಿಶೀಲನೆಯನ್ನು ಗಮನಕ್ಕೆ ತೆಗೆದುಕೊಂಡು, ಅರ್ಜಿದಾರರ ಪರ ವಕೀಲರು, ಈ ಅರ್ಜಿದಾರರು ಸರ್ಕಾರಿ ಉದ್ಯೋಗಿಗಳಲ್ಲವೆಂದು ವಾದಿಸಿದ್ದಾಗ್ಯೂ, ಈ ಅರ್ಜಿದಾರರ ವಿರುದ್ಧ ಇತರೆ ಅಪರಾಧಗಳನ್ನು ಅನ್ವಯಿಸಲಾಯಿತೆಂದು ಗಮನಿಸಬೇಕಾಗಿರುತ್ತದೆ. ಹಾಗಾಗಿ, ಈತನ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ. ದಾಖಲೆ ಮೇಲಿನ ವಸ್ತು ವಿಷಯವನ್ನು

ಅಲ್ಲದೆ ಈ ಅರ್ಜಿದಾರರ ವಿರುದ್ಧ ಮಾಡಿದ ಆಪಾದನೆಗಳನ್ನು ಪರಿಗಣಿಸಿದಾಗ, ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿ ರಿಟ್ ಅಧಿಕಾರ ವ್ಯಾಪ್ತಿಯನ್ನು ಹಾಗೂ ಅಧಿಕಾರಗಳನ್ನು ಚಲಾಯಿಸಲು ಇದು ಯುಕ್ತ ಪ್ರಕರಣವಾಗಿರುವುದಿಲ್ಲ ಹಾಗೂ ವಂಚನೆಯನ್ನು ಆಪಾದಿಸಿದಾಗ ಹಾಗೂ ಆಪಾದನೆಯ ಒಟ್ಟಾರೆಯಾಗಿ ಸಮಾಜಕ್ಕೆ ಸಂಬಂಧಿಸಿದ್ದಾಗ ಈ ಪ್ರಕರಣಗಳಲ್ಲಿನ ವಿವಾದಿತ ವಾಸ್ತವಾಂಶದ ಪ್ರಶ್ನೆಯನ್ನು ನಿರ್ಧರಿಸಲಾಗುವುದಿಲ್ಲ. ಹಾಗಾಗಿ, ಇದು, ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳನ್ನು ಅನ್ವಯಿಸಿ ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿನ ಅಧಿಕಾರಗಳನ್ನು ಚಲಾಯಿಸಿಲು ಯುಕ್ತ ಪ್ರಕರಣವಾಗಿರುವುದಿಲ್ಲ.

11. ಮೇಲೆ ಮಾಡಲಾದ ಚರ್ಚೆಯ ಹಿನ್ನೆಲೆಯಲ್ಲಿ ನಾನು ಈ ಮುಂದಿನ ಆಜ್ಞೆಯನ್ನು ಹೊರಡಿಸಿರುತ್ತೇನೆ.

**ಆಜ್ಞೆ**

ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ.

ಈ ಅಭಿಪ್ರಾಯವು, ಗುಣಾರ್ಹತೆಗಳ ಮೇಲೆ ವಿಷಯವನ್ನು ಪರಿಗಣಿಸುವಲ್ಲಿ ಅಧೀನ ನ್ಯಾಯಾಲಯಗಳನ್ನು ಪ್ರಭಾವಿಸತಕ್ಕುದಲ್ಲ.